**ಪಾವಗಡ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

**ಸಿಸಿ-*1241/2021***

| | | |
|---|---|---|
| ಫಿರ್ಯಾದುದಾರರುಃ | -ವಿರುದ್ಧ- | ಆರೋಪಿ |
| ವೈ.ಎನ್.ಹೊಸಕೋಟೆ ಪೋಲೀಸ್ | | ಅರುಣ @ ಅರುಣಕುಮಾರ ಮತ್ತು ಇನ್ನೊಬ್ಬರು. |

**ದೋಷಾರೋಪಣೆ**

ಶ್ರೀಮತಿ ಅಖಿಲಾ ಹೆಚ್.ಕೆ., ಬಿ.ಎ., ಎಲ್.ಎಲ್.ಬಿ., ಅಧಿಕ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಪಾವಗಡ ಆದ ನಾನು

ಆರೋಪಿತರು : 1. ಅರುಣ @ ಅರುಣಕುಮಾರ್ ಬಿನ್ ಲೇ.ರಂಗಸ್ವಾಮಿ, 20 ವರ್ಷ,
2. ಸಂಜೀವರಯುಲು @ ಸಂಜು @ ಸಂಜೀವ ಬಿನ್ ಮಾರಪ್ಪ, 21 ವರ್ಷ,

ವಾಸಃ ಅರೇಕ್ಯಾತನಹಳ್ಳಿ ಗ್ರಾಮ, ಪಾವಗಡ ತಾಲ್ಲೂಕ್,

ನಿಮ್ಮ ಮೇಲೆ ದೋಷಾರೋಪಣೆ ಮಾಡುವುದು ಏನೆಂದರೆ,

1. ದಿನಾಂಕ:10.08.2020 ರಂದು ರಾತ್ರಿ 08.30 ಗಂಟೆ ಸಮಯದಲ್ಲಿ ವೈ.ಎನ್.ಹೊಸಕೋಟೆ ಪೊಲೀಸ್ ಠಾಣಾ ವಾಪ್ತಿಯ ತಿಪ್ಪಗಾನಹಳ್ಳಿ ಗ್ರಾಮದಲ್ಲಿನ ಚಾ.ಸಾ.1 ರವರು ಅವರ ಬಾಬ್ತು ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿದ್ದು ಆರೋಪಿತರಾದ ನೀವು ಕಬ್ಬಿಣದ ರಾಡ್ ತೆಗೆದುಕೊಂಡು ಕೆಎ-64-ಕ್ಯೂ-7362 ನೇ ಬೈಕಿನಲ್ಲಿ ಚಾ.ಸಾ.1 ರವರ ಮನೆಯ ಹತ್ತಿರ ದಿನಾಂಕ 10.08.2020 ರಂದು ರಾತ್ರಿ ಬಂದು ಚಾ.ಸಾ.1 ರವರ ಮನೆಯ ಬಾಗಿಲಿಗೆ ಹಾಕಿದ್ದ ಬೀಗವನ್ನು 1 ಮತ್ತು 2 ನೇ ಆರೋಪಿತರಾದ ನೀವು ತಂದಿದ್ದ ಕಬ್ಬಿಣದ ರಾಡಿನಿಂದ ಮೀಟಿ ಮನೆಯ ಒಳಗೆ ಪ್ರವೇಶ ಮಾಡಿರುತ್ತೀರಿ. ಆ ಮೇರೆಗೆ ನೀವು ಭಾರತೀಯ ದಂಡ ಸಂಹಿತೆ ಕಲಂ **457** ರನ್ವಯ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

2. ಮೇಲೆ ಹೇಳಿದ ದಿನಾಂಕ, ಸ್ಥಳದಲ್ಲಿ ಆರೋಪಿತರಾದ ನೀವು ಚಾ.ಸಾ.1 ರವರ ಮನೆಯೊಳಗೆ ಇದ್ದ ಬೀರುವಿನ ಬಾಗಿಲನ್ನು ಕಬ್ಬಿಣದ ರಾಡಿನಿಂದ ಮೀಟಿ ತೆಗೆದು ಬೀರುವಿನಲ್ಲಿದ್ದ 1) 50 ಗ್ರಾಂ ತೂಕದ ಒಂದು ಬೆಳ್ಳಿಯ ಲಕ್ಷ್ಮೀ ಮುಖವಾಡ ಮತ್ತು 20,000/- ರೂ ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತೀರಿ. ಆ ಮೇರೆಗೆ ನೀವು ಭಾರತೀಯ ದಂಡ ಸಂಹಿತೆ ಕಲಂ **380** ರನ್ವಯ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ಕಾರಣಗಳಿಗಾಗಿ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು.

ಅಧಿಕ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ.ಎಫ್.ಸಿ
ಪಾವಗಡ.